ದಿನಾಂಕ ಃ 30.06.2025 ರಂದು ಪ್ರಮಾಣ ವಚನ ಬೋಧಿಸಲಾಗಿದೆ.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಅದೇ ದಿನ ಸದರಿ ಮಹಜರ್ ಕ್ರಮ ಜರುಗಿಸಿದ ನಂತರ ಠಾಣೆಗೆ ವಾಪಸ್ಸಾಗಿ ಆರೋಪಿತರು ತನಿಖೆಗೆ ಅವಶ್ಯಕತೆ ಇಲ್ಲದ ಕಾರಣ, ಠಾಣಾ ಸಿಬ್ಬಂದಿಯೊಡನೆ ಮಾನ್ಯ ಘನ ನ್ಯಾಯಾಲಯಕ್ಕೆ 1, 2, 5 ಮತ್ತು 7 ನೇ ಆರೋಪಿತರನ್ನು ಹಾಜರು ಪಡಿಸಿರುತ್ತೇನೆ.
2. ದಿಃ 06.10.2020 ರಂದು ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯ ಪಿಎಸ್ಐ ರವರ ಕೊಠಡಿಯಲ್ಲಿ ಪಂಚರಾದ ಪ್ರಾಸಾ.3 ಶರತ್, ಪ್ರಾಸಾ.5 ಜಯಣ್ಣರವನ್ನು ಬರಮಾಡಿಕೊಂಡು ಈ ಪ್ರಕರಣದ ಬಗ್ಗೆ ಸದರಿ ಪ್ರಕರಣದ ಸಾರಾಂಶವನ್ನು ಪಂಚರಿಗೆ ತಿಳಿಸಿ, ಸದರಿಯವರು ಪಂಚರಾಗಿ ಬರಲು ಒಪ್ಪಿಕೊಂಡ ಮೇರೆಗೆ, ಸದರಿಯವರಿಗೆ ನಿಪಿ.18 ರಂತೆ ನೋಟಿಸನ್ನು ಜಾರಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ನೋಟಿಸನ್ನು ನೋಡಿ ಗುರುತಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ನಿಪಿ.18(ಬಿ) ಎಂದು ಗುರುತಿಸಲಾಯಿತು.
3. ನಂತರ ಸ್ಥಳದಲ್ಲಿ ಈ ಪ್ರಕರಣ ಪಿರ್ಯಾದಿಯಾದ ಚಾಸಾ.1ರವರು ಹಾಜರಿದ್ದು, ದಿಃ 30.09.2020 ರಂದು, ಬೇರ್ಪಡಿಸಿದ ಆರೋಪಿ - ಚಿಕ್ಕವೀರಭದ್ರಯ್ಯ ರವರ ಕುಮ್ಮಕ್ಕಿನಿಂದ 1 ರಿಂದ 6 ನೇ ಆರೋಪಿತರಾದ ಶಂಕರ್, ಸಿದ್ದಪ್ಪ, ಶ್ರಿನಿಧಿ,ಗೀತಾ, ಲಕ್ಷ್ಮೀ, ಭಾಗ್ಯ ಮತ್ತು ಪುಟ್ಟಈರಮ್ಮ ರವರು, ಪ್ರಾಸಾ.1 ಮತ್ತು 2 ರವರಿಗೆ ಮಾರಣಾಂತಿಕ ಹಲ್ಲೆ ಮಾಡಿದ ಸಮಯದಲ್ಲಿ, ಪ್ರಾಸಾ.2 ರವರು ಧರಿಸಿದ್ದ ಬಟ್ಟೆಗಳನ್ನು ಸದರಿ ಸ್ವಾಮಿರವರು ಬೆಂಗಳೂರಿನ ಆಸ್ಟ ಆಸ್ಪತ್ರೆಯಲ್ಲಿ ಇಟ್ಟುಕೊಂಡಿದ್ದು, ಸದರಿ ಬಟ್ಟೆಗಳಾದ ಬನಿಯನ್ ಹಾಗೂ ಪ್ಯಾಂಟನ್ನು ಸದರಿ ಆಸ್ಪತ್ರೆಯಲ್ಲಿ ಪಡೆದು, ಅವುಗಳನ್ನು ಪ್ರಾಸಾ.1 ರವರು ತಂದು ಹಾಜರು ಪಡಿಸಿದ್ದುದನ್ನು, ಪಂಚರ ಸಮಕ್ಷಮ ಪಡೆದಿರುತ್ತೇನೆ. ಸದರಿ ಪ್ರಾಸಾ.2 ರವರ ಬಟ್ಟೆಗಳಾದ ಬಿಳಿ ಬಣ್ಣದ ಬನಿಯನ್ ನಲ್ಲಿ ರಕ್ತ ಕಲೆ ಇದ್ದಿರುತ್ತದೆ ಹಾಗೂ ಸೀಮೆಂಟ್ ಬಣ್ಣದ ಪ್ಯಾಂಟ್‌ನಲ್ಲಿ ಎರಡೂ ಭಾಗದಲ್ಲಿ ಕೇಸರಿ ಬಣ್ಣದ ಗೆರೆ ಇದ್ದಿರುತ್ತದೆ. ಸದರಿ ಪ್ರಾಸಾ.1 ರವರು ಘಟನಾ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು ಹಾಜರು ಪಡಿಸಿರುತ್ತಾರೆ. ಸದರಿ ಪ್ರಾಸಾ.1 ರವರು ಧರಿಸಿದ್ದ ಬಟ್ಟೆಗಳಾದ ಒಂದು ಕೆಂಪು ಬಣ್ಣದ ಟೀ ಶರಟು, ಹಸಿರು ಬಣ್ಣದ ಗೀರುಗಳುಳ್ಳ ನೈಟ್ ಪ್ಯಾಂಟ್, ಅಲ್ಲಲ್ಲಿ ರಕ್ತ ಕಲೆಯಾದ ಒಂದು ಬಿಳಿ ಬಣ್ಣದ ಸ್ಯಾಂಡೋ ಬನಿಯನ್, ಒಂದು ಕಾಫಿ ಕಲರ್ ನೈಟ್ ಪ್ಯಾಂಟ್‌ಗಳನ್ನು ಹಾಜರಿಸಿದ್ದು, ಅವುಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಪ್ರಾಸಾ.1 ಮತ್ತು 2 ರವರ ಬಟ್ಟೆಗಳನ್ನು ಪಂಚರ ಸಮಕ್ಷಮದಲ್ಲಿ ಪ್ರತ್ಯೇಕವಾಗಿ ಬಿಳಿ ಬಟ್ಟೆಯ ಚೀಲದಲ್ಲಿ ಹೊಲೆದು, J ಎಂಬ ಅಕ್ಷರದಿಂದ ಸೀಲುಮಾಡಿ, ವಶಕ್ಕೆ ಪಡೆದಿರುತ್ತೇನೆ. ಸದರಿ ಸಮಯದಲ್ಲಿ ಫೋಟೋ ಸಹ ತೆಗೆಸಿಕೊಂಡಿರುತ್ತೇನೆ.

ಸದರಿ ಸ್ಥಳದಲ್ಲಿ ಕಾಳಯ್ಯ ಹೆಚ್.ಸಿ-109 ರವರ ಮುಖೇನ ಮಹಜರನ್ನು ಬರೆಯಿಸಿಕೊಂಡಿರುತ್ತೇನೆ. ಸಾಕ್ಷಿಯು, ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.11(ಇ) ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.12 ರಿಂದ 17 ಎಂದು ಗುರುತಿಸಲಾಗಿದ್ದು, ಸದರಿ ನಿಪಿ.13, 15 ಮತ್ತು 17 ರ ಕೆಳಭಾಗದಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ನಿಪಿ.13(ಎ), 15(ಎ) ಮತ್ತು 17(ಎ) ಎಂದು ಗುರುತಿಸಲಾಯಿತು.

4. ಸದರಿ ಅಮಾನತ್ತು ಪಡಿಸಿಕೊಂಡ ಫ್ರಾಸಾ.1 ಮತ್ತು 2 ರವರ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಮುದ್ದೆಮಾಲು 13 – ಫ್ರಾಸಾ.1 ರವರ ಟೀ ಶರಟು ಎಂದು, ಮುದ್ದೆಮಾಲು 11- ಫ್ರಾಸಾ.2 ರವರ ಪ್ಯಾಂಟ್ ಎಂದು, ಮುದ್ದೇಮಾಲು 9 - ಫ್ರಾಸಾ.2 ರವರ ಬನಿಯನ್ ಎಂದು, ಮುದ್ದೇಮಾಲು 10- ಫ್ರಾಸಾ.1 ರವರ ಬನಿಯನ್, ಮುದ್ದೆಮಾಲು 15- ಫ್ರಾಸಾ.1 ರವರ ಹಸಿರು ಬಣ್ಣದ ಗೀರುಗಳುಳ್ಳ ನೈಟ್ ಪ್ಯಾಂಟ್ ಎಂದು ಗುರುತಿಸಿರುತ್ತಾರೆ. ಸದರಿ ಮುದ್ದೇಮಾಲು 9 ರಿಂದ 11, 13, ಹಾಗೂ 15 ಇರಿಸಿರುವ ಬಿಳಿಯ ಚೀಲದ ಮೇಲೆ ಅಂಟಿಸಲಾದ ಚೀಟಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ಮುಮಾ.9(ಬಿ) ಯಿಂದ 11(ಬಿ), 13(ಬಿ) ಹಾಗೂ 15(ಬಿ) ಎಂದು ಗುರುತಿಸಲಾಯಿತು.

5. ಸದರಿ ಪಂಚನಾಮೆಗೆ ಪಂಚರ ಸಹಿಗಳನ್ನು ಪಡೆದುಕೊಂಡಿರುತ್ತೆನೆ ಹಾಗೂ ಬಟ್ಟೆ ಹಾಜರು ಪಡಿಸಿದ ಫ್ರಾಸಾ.1 ರವರ ಸಹಿಯನ್ನು ಸಹ ಪಡೆದಿರುತ್ತೇನೆ. ನಂತರ ಸದರಿ ವಸ್ತುಗಳನ್ನು ಮಾಲುಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯ ಕ್ಕೆ ನಿವೇದಿಸಿಕೊಂಡಿರುತ್ತೇನೆ .

6. ಅದೇ ದಿನ ಹೆಚ್ಸಿ-109 ಕಾಳಯ್ಯ ರವರನ್ನು ಕರೆದುಕೊಂಡು, ಬೆಂಗಳೂರಿನ ಆಷ್ಟ ಆಸ್ಪತ್ರೆ ಗೆ ಭೇಟಿ ನೀಡಿ, ಫ್ರಾಸಾ.2 ರವರು ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿ ಇದ್ದಾರೆಯೋ, ಇಲ್ಲವೊ ಎಂದು ಮನವಿ ನೀಡಿರುತ್ತೇನೆ. ಸಾಕ್ಷಿಯು ಸದರಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.49 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.49(ಬಿ) ಎಂದು ಗುರುತಿಸಲಾಯಿತು.

7. ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಫ್ರಾಸಾ.2 ರವರು ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿ ಇಲ್ಲವೆಂದು ಹಿಂಬರವನ್ನು ನೀಡಿರುತ್ತಾರೆ. ನಂತರ ಫ್ರಾಸಾ.2 ರವರ ರಕ್ತದ ಗ್ರೂಪ್ ನ್ನು ಪಡೆಯುವ ಸಲುವಾಗಿ ನಿವೇದನೆಯೊಂದಿಗೆ ಕಾಳಯ್ಯ ರವರನ್ನು ನೇಮಕ ಮಾಡಿರುತ್ತೇನೆ. ಸಾಕ್ಷಿಯು ಸದರಿ

ನಿವೇದನೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.50 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.50(ಎ) ಎಂದು ಗುರುತಿಸಲಾಯಿತು.

8. ಅದೇ ದಿನ ಪ್ರಾಸಾ.2 ರವರ ರಕ್ತದ ಗ್ರೂಪ್ ಬಗ್ಗೆ ವರದಿಯನ್ನು ಪಡೆದಿರುತ್ತೇನೆ. ಅದನ್ನು ಈಗಾಗಲೇ ನಿಪಿ.51 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.51(ಎ)ಎಂದು ಗುರುತಿಸಲಾಯಿತು.

9. ನಂತರ ಠಾಣೆಗೆ ವಾಪಸ್ ಆಗಿ, ಮುಂದಿನ ತನಿಖೆಗಾಗಿ ಕಡತವನ್ನು ಪಿಎಸ್ಐ – ಚಾಸಾ. 25 ರವರಿಗ ನೀಡಿರುತ್ತೇನೆ.

10. ದಿಃ 30.09.2020 ರಂದು ಪಂಚರಿಗೆ ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.32 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.32(ಬಿ) ಎಂದು ಗುರುತಿಸಲಾಯಿತು. ದಿಃ01.10.2020 ರಂದು ಪಂಚರಿಗೆ ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.33 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.33(ಬಿ) ಎಂದು ಗುರುತಿಸಲಾಯಿತು.

11. ಸಾಕ್ಷಿಯು ಆಸ್ಪತ್ರೆಯ ಮೆಮೋವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.43 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.43(ಎ) ಎಂದು ಗುರುತಿಸಲಾಯಿತು. ಸರ್ಕಾರಿ ಅಭಿಯೋಜಕರು ನಿಪಿ.48 ನ್ನು ಸಾಕ್ಷಿಗೆ ತೋರಿಸಲಾಗಿ, ಅದನ್ನು ಆಸ್ಪ ಆಸ್ಪತ್ರೆಯವರು ನೀಡಿದ ವೈದ್ಯಕೀಯ ವರದಿ ಎಂದು ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ.48 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.48(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ,ಶ್ರೀ ಬಿ.ಆರ್.ವಿ ವಕೀಲರಿಂದಃ**

ಆರೋಪಿತರ ಪರ ವಕೀಲರು ಸಾಕ್ಷಿಯು ಪಾಟೀ ಸವಾಲಿಗೆ ಸಮಯಾಕಾಶ ಕೋರುತ್ತಿದ್ದು, ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಕಾರಣಗಳು ಇರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.